12	ಶ್ರೀ ಶಿವಯ್ಯಾ ಮುತ್ಯಾ ದೇವಸ್ಥಾನ ಹುಲಕಲ್ ತಾ:ಶಹಾಪುರ	100000
13	ಶ್ರೀ ಮೈಲಾರಲಿಂಗೇಶ್ವರ ದೇವಸ್ಥಾನ ಗುಂಡಗುರ್ತಿ ತಾ:ಶಹಾಪುರ	100000
14	ಶ್ರೀ ಹನುಮಾನ ದೇವಸ್ಥಾನ ಗುಂಡಗುರ್ತಿ ತಾ:ಶಹಾಪುರ	200000
15	ಶ್ರೀ ಹನುಮಾನ ದೇವಸ್ಥಾನ ಗುಂಡಗುರ್ತಿ ತಾ:ಶಹಾಪುರ	50000
ಒಟ್ಟು		2080000

ಕನಿಷ್ಠ ಸಂಖ್ಯೆಯ ದಾಖಲಾತಿ ಇರುವ ಕನ್ನಡ ಶಾಲೆಗಳು

75 (373)

ಶ್ರೀ ಹ್ಯಾರಿಸ್ ಎನ್.ಎ. (ಶಾಂತಿನಗರ)

ಅ) ರಾಜ್ಯದಲ್ಲಿ ಕನಿಷ್ಟ ವಿದ್ಯಾರ್ಥಿಗಳ ದಾಖಲೆಯನ್ನು ಹೊಂದಿರುವ ಶಾಲೆಗಳನ್ನು ಮುಚ್ಚುವ, ಅಲ್ಲಿನ ವಿದ್ಯಾರ್ಥಿಗಳನ್ನು ಹತ್ತಿರದಲ್ಲಿರುವ ಶಾಲೆಗಳಿಗೆ ಸೇರಿಸುವ ಬಗ್ಗೆ ಪರ್ಯಾಯ ವ್ಯವಸ್ಥೆಯನ್ನು ಕೈಗೊಳ್ಳಲು ಸರ್ಕಾರವು ನಿರ್ಧರಿಸಿದೆಯೇ; ಹಾಗಿದ್ದಲ್ಲಿ, ಸರ್ಕಾರದ ನಿಲುವುಗಳೇನು;

ಆ) ವಿದ್ಯಾರ್ಥಿಗಳನ್ನು ಸಮೀಪದ ಶಾಲೆಗಳಿಗೆ ಸೇರ್ಪಡೆಗೊಳಿಸುವುದಾದಲ್ಲಿ, ಗ್ರಾಮಾಂತರದ ಮಕ್ಕಳಿಗೆ ಸರ್ಕಾರದವರು ವಾಹನ ಸೌಲಭ್ಯವನ್ನು ಒದಗಿಸಿ ಪ್ರೋತ್ಸಾಹಿಸಲು ಕ್ರಮ ಜರುಗಿಸುವುದೇ;

ಇ) ಅತ್ಯಂತ ಕಡಿಮೆ ವಿದ್ಯಾರ್ಥಿಗಳ ದಾಖಲಾತಿಯನ್ನು ಹೊಂದಿರುವ ಶಾಲೆಗಳ ಶಾಲಾಭಿವೃದ್ಧಿ ಸಮಿತಿಗಳ ಸಲಹೆ ಸೂಚನೆಗಳನ್ನು ಸರ್ಕಾರವು ಪಡೆದಿದೆಯೇ? ಶಾಲಾಭಿವೃದ್ಧಿ ಸಮಿತಿಗಳನ್ನು ಅರ್ಥಪೂರ್ಣವಾಗಿ ಮತ್ತು ಪರಿಣಾಮಕಾರಿಯಾಗಿ ಕಾರ್ಯನಿರ್ವಹಿಸುವಲ್ಲಿ ಸರ್ಕಾರದ ಮಾರ್ಗಸೂಚಿಗಳೇನು?

ಶ್ರೀ ವಿಶ್ವೇಶ್ವರಯ್ಯ ಹೆಗಡೆ ಕಾಗೇರಿ
(ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು)

ಅ) ಮಕ್ಕಳ ಕಲಿಕೆಯ ಹಿತದೃಷ್ಟಿಯಿಂದ 5ಕ್ಕಿಂತ ಮತ್ತು 10ಕ್ಕಿಂತ ಕಡಿಮೆ ವಿದ್ಯಾರ್ಥಿಗಳಿರುವ ಸರ್ಕಾರಿ ಕಿರಿಯ/ಹಿರಿಯ ಪ್ರಾಥಮಿಕ ಶಾಲೆಗಳಲ್ಲಿರುವ ಮಕ್ಕಳನ್ನು ನೆರೆಹೊರೆಯಲ್ಲಿರುವ, ಸಂಪನ್ಮೂಲ ಹೊಂದಿರುವ ಶಾಲೆಗಳಿಗೆ ವಿಲೀನಗೊಳಿಸಿದಲ್ಲಿ, ಇಂತಹ ಶಾಲೆಗಳನ್ನು ಸಬಲೀಕರಣ ಮಾಡಿದಂತಾಗುತ್ತದೆ. ಹಾಗೂ ವಿದ್ಯಾರ್ಥಿಗಳಿಗೆ ಸರಿಯಾದ ಕಲಿಕಾ ವಾತಾವರಣವನ್ನು ಒದಗಿಸಿದಂತಾಗುತ್ತದೆ ಎಂಬ ಉದ್ದೇಶದ ಹಿನ್ನೆಲೆಯಲ್ಲಿ, ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು ಇವರು ದಿ.

24.9.2011 ರಂದು 5 ಕ್ಕಿಂತ ಮತ್ತು 10ಕ್ಕಿಂತ ಕಡಿಮೆ ವಿದ್ಯಾರ್ಥಿಗಳಿರುವ ಸರ್ಕಾರಿ ಕಿರಿಯ/ಹಿರಿಯ ಪ್ರಾಥಮಿಕ ಶಾಲೆಗಳನ್ನು ನೆರೆಹೊರೆ ಶಾಲೆಗಳೊಂದಿಗೆ ವಿಲೀನಗೊಳಿಸುವ ಬಗ್ಗೆ ಅಧಿಕೃತ ಜ್ಞಾಪನ/ಸುತ್ತೋಲೆಯನ್ನು ಹೊರಡಿಸಿರುತ್ತಾರೆ. ಇಂತಹ, ಅಂದರೆ 5 ಮತ್ತು 5ಕ್ಕಿಂತ ಕಡಿಮೆ ದಾಖಲಾಗಿರುವ ಶಾಲೆಗಳ ಸಂಖ್ಯೆ 539 ಇರುತ್ತವೆ.

ಈ ರೀತಿ, ಶಾಲೆಗಳನ್ನು ವಿಲೀನಗೊಳಿಸಿರುವುದರಿಂದ, ಮತ್ತು ಕೆಲವು ಜನವಸತಿ ಪ್ರದೇಶಗಳಲ್ಲಿ ಕಿರಿಯ ಪ್ರಾಥಮಿಕ ಶಾಲೆಗಳು ಒಂದು ಕಿ.ಮೀ.ಗಿಂತ ದೂರ ಮತ್ತು ಹಿರಿಯ ಪ್ರಾಥಮಿಕ ಶಾಲೆಗಳು 3 ಕಿ.ಮೀ.ಗಿಂತ ದೂರವಿರುವುದರಿಂದ, ಇಂತಹ ಶಾಲೆಗಳಿಗೆ ಹೋಗಿ ಬರಲು ಸಾರಿಗೆ ಸೌಲಭ್ಯಕ್ಕಾಗಿ ಪ್ರತಿ ತಿಂಗಳು ರೂ.300/–ರಂತೆ ಫಲಾನುಭವಿ ವಿದ್ಯಾರ್ಥಿಗಳಿಗೆ ಸಾರಿಗೆ ಭತ್ಯೆಯನ್ನು ಶೈಕ್ಷಣಿಕ ವರ್ಷದ 10 ತಿಂಗಳಿಗೆ ಬಿಡುಗಡೆ ಮಾಡಲು ಆದೇಶಿಸಿದೆ.

ಆದರೆ, ಈ ನಿರ್ಣಯದ ವಿರುದ್ಧ ಮಾನ್ಯ ಕರ್ನಾಟಕ ಉಚ್ಚ ನ್ಯಾಯಾಲಯದಲ್ಲಿ ರಿಟ್ ಅರ್ಜಿ ಸಂಖ್ಯೆ 45024/2011ನ್ನು ದಾಖಲಿಸಿದ್ದು, ದಿ.16.12.2011ರಂದು ಕೆಳಕಂಡಂತೆ ತಡೆಯಾಜ್ಞೆ ನೀಡಲಾಗಿತ್ತು.

"Till the next date, status-quo which exists as on today be maintained as regards closure/merger of Schools"

ತದನಂತರ, ಮಾನ್ಯ ಕರ್ನಾಟಕ ಉಚ್ಚ ನ್ಯಾಯಾಲಯವು ದಿ.20.6.2012ರಂದು ಅಂತಿಮ ತೀರ್ಪನ್ನು ಕೆಳಕಂಡಂತೆ ನೀಡಿದೆ:–

"7. In response thereto, the Additional Advocate General relied on Rule4 (5) of the Act which casts an obligation on the State to make suitable arrangements for free transportation of students wherever the private school is located beyond the prescribed distance. Sub-rule (3) also makes it an optional duty on the State Government to merge existing schools with Classes I to V including Classes VI to VIII also.Similarly, in respect of schools which start from Class VI onwards, the State Government is empowered to add Class I to V wherever required.

8. Learned Addl. Advocate General gives us a solemn undertaking that free transportation shall be made

available to every student who has to travel beyond the aforementioned prescribed distances after the merger of the Schools.

9. We accept this undertaking and make it the foundation of our decision Accordingly, if it is brought to the notice of the court that Government schools have been closed down and merged with other schools without providing free transportation facilities, it would invite Judical action under the Contempt of Courts Act, wherever neighbouring Schools within the said distance is not available.

10.Interim orders are recalled. The writ petition is disposed of in these terms, leaving liberty to initiate appropriate action wherever a Government School has been closed and free transportation has not been put in place where the merged school is beyond the prescribed distance."

ಈಗ, 1 ಕಿಮೀ ವ್ಯಾಪ್ತಿಯಲ್ಲಿ ಯಾವುದೇ ಸರ್ಕಾರಿ ಶಾಲೆ ಇಲ್ಲದಿದ್ದಲ್ಲಿ, ಶಾಲೆಯನ್ನು ವಿಲೀನಗೊಳಿಸದೇ, ಅಲ್ಲಿಯೇ ಮುಂದುವರೆಸಲಾಗಿದೆ. ಗುಡ್ಡಗಾಡು ಹಾಗೂ ಮಲೆನಾಡು ಪ್ರದೇಶದ ಶಾಲೆಗಳನ್ನು ವಿಲೀನ ಪ್ರಕ್ರಿಯೆಯಿಂದ ಕೈಬಿಡಲಾಗಿದೆ.

ಆ) ಹೌದು

ಇ) ಸರ್ವ ಶಿಕ್ಷಣ ಅಭಿಯಾನದಡಿ ಶಾಲಾಭಿವೃದ್ಧಿ ಸಮಿತಿ ಅಧ್ಯಕ್ಷರು ಹಾಗೂ ಸದಸ್ಯರುಗಳಿಗೆ ತರಬೇತಿ ನೀಡಲಾಗುತ್ತಿದೆ. ಈ ಉದ್ದೇಶಕ್ಕಾಗಿ, 2012-13ನೇ ಸಾಲಿನ ಆಯವ್ಯಯದಲ್ಲಿ ರೂ.22.21 ಕೋಟಿಗಳನ್ನು ಒದಗಿಸಲಾಗಿದ್ದು, ಇದರಲ್ಲಿ ವೆಚ್ಚ ಮಾಡಲಾಗುತ್ತಿದೆ.